


ಹಂಪಿ– ಜಲವರ್ಣ ಕಲಾಕೃತಿ

**(6ನೇ ಪುಟದಿಂದ)**

ಕುರಿತು ಸಾಹಸ ಹಾಗೂ ಸ್ವರ್ಗೀಯ ದಾಹ ಎದ್ದು ಕಾಣುತ್ತಿತ್ತು.

ಬಾಬಾ (ಎಂ.ಎಫ್.ಹುಸೇನ್) ಅವರು ನನ್ನ ತಂದೆಯ ಆತ್ಮೀಯ ಮಿತ್ರರಾಗಿದ್ದರು. ನನ್ನ ಸೃಜನಶೀಲ ಮತ್ತು ವೈಯಕ್ತಿಕ ಬೆಳವಣಿಗೆ ಎರಡರಲ್ಲೂ ಅವರ ಪ್ರಭಾವ ಇದೆ. ಅವರು ಅವತ್ತು ಮಾಡಿದ ಒತ್ತಾಯದ ಹಿನ್ನೆಲೆಯಲ್ಲೇ ನಾನು ಈಗ ಅಪ್ಪನ ಕೆಲಸಗಳ ಕುರಿತು ಒಂದು ಅಪೂರ್ವ ಕೃತಿಯನ್ನು ಹೊರ ತರಲು ಸಾಧ್ಯವಾಗಿದೆ. 'ಫೂಟ್‌ಪ್ರಿಂಟ್ಸ್ ಶೆಣೈ' ಎನ್ನುವ ಈ ಬೃಹತ್ ಕೃತಿಯ ಮೂಲಕ ಮಾತ್ರ ಅವರಿಗೆ ನೈಜ ಗೌರವ ಸಲ್ಲಬಹುದು ಎನ್ನುವುದು ನನ್ನ ಅನಿಸಿಕೆ.

ಜಿ.ಎಸ್.ಶೆಣೈ (1938–1994) ಉಡುಪಿಯಲ್ಲಿ ಹುಟ್ಟಿ, ಮೈಸೂರಿನ ಕಾವಾದಲ್ಲಿ ಕಲಿತು, ಬಳಿಕ ಮುಂಬೈಯ ಜೆ.ಜೆ ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಪದವಿ ಪಡೆದರು. ದಕ್ಷಿಣ ಕನ್ನಡದ ಪ್ರಾದೇಶಿಕ ಪ್ರಕೃತಿಯ ಚಿತ್ರಗಳ ಮೂಲಕ ದೇಶೀಯ ಕಲಾ ಕ್ಷೇತ್ರದಲ್ಲಿ ತನ್ನದೇ ಆದ ಛಾಪು ಒತ್ತಿದ ಅವರು, ರಾಜ್ಯದ ಸಾಂಸ್ಕೃತಿಕ ಚಳವಳಿಯಲ್ಲೂ ಗಟ್ಟಿ ಧ್ವನಿ ಮೊಳಗಿಸಿದವರು. ಉಡುಪಿಯಲ್ಲಿ ಫೋಟೋ ಸ್ಟುಡಿಯೊ ಸ್ಥಾಪಿಸಿ, ಸಣ್ಣದೊಂದು ಕಲಾಶಾಲೆ 'ಕಲಾ ಭಾರತಿ' ಯನ್ನೂ ನಡೆಸಿದರು. 'ಕರಾವಳಿ ಮೈಸೂರಿನ ಪ್ರಗತಿಪರ ಕಲಾವಿದರ' ತಂಡ ಕಟ್ಟಿದವರು. ಬೆಂಗಳೂರಿನಲ್ಲಿ ಕಲಾವಿದರ ಪ್ರದರ್ಶನಕ್ಕೆ ಗ್ಯಾಲರಿಗಳು ಸಾಕಷ್ಟು ಇಲ್ಲದಾಗ ಅದಕ್ಕಾಗಿ ಹೋರಾಡಿದವರು. ಅವರು ಮಣಿಪಾಲದಲ್ಲಿ 1976ರಲ್ಲಿ ನಡೆಸಿದ ಕಲಾವಿದರ ಶಿಬಿರದಲ್ಲೇ 'ಸೌತ್ ಕೆನರಾ ಆರ್ಟ್ ಕೌನ್ಸಿಲ್' ಹುಟ್ಟಿತು.

ಸಮೃದ್ಧ ಸಹ್ಯಾದ್ರಿ, ಕಲಾತ್ಮಕ ಹಂಪಿ ಮತ್ತು ಕರಾವಳಿ ಮಂಗಳೂರಿನ ಕುರಿತು ಅವರು ಹಲವು ಸರಣಿ ಚಿತ್ರಗಳನ್ನು ರಚಿಸಿದರು. ಅದರಲ್ಲಿ ಆಕಾಶ, ಸಮುದ್ರ, ನದಿ, ನೆಲ, ಕಲ್ಲುಬಂಡೆ- ಗಳೆಲ್ಲ ಇವತ್ತಿಗೂ ಜೀವ ತಳೆದು ನಿಂತಿವೆ. ಜಲವರ್ಣ, ತೈಲವರ್ಣ, ಮರ ಮತ್ತು ಲೋಹ– ಎಲ್ಲ ಮಾಧ್ಯಮಗಳಲ್ಲೂ ಅವರ ಕಲಾಪ್ರೀತಿ ಉಕ್ಕಿ ನಿಂತಿದೆ. ಕಲೆಯನ್ನು ಸಾಮಾನ್ಯ ಜನರ ಬಳಿಗೆ ಒಯ್ಯುವುದು ಅವರ ಕನಸಾಗಿತ್ತು. ಕೊನೆಯವರೆಗೂ ಅದೇ ಅವರನ್ನು ಕೈಹಿಡಿದು ಮುನ್ನಡೆಸಿತು.

(ಬೆಂಗಳೂರಿನಲ್ಲಿ ಮಾರ್ಚ್ 31ರಂದು ಜಿ.ಎಸ್.ಶೆಣೈ ಅವರ ಆಯ್ದ ಕಲಾಕೃತಿಗಳ ಪ್ರದರ್ಶನ,ಅವರ ಕುರಿತ ಪುಸ್ತಕ 'ಫೂಟ್‌ಪ್ರಿಂಟ್ಸ್ ಶೆಣೈ' ಬಿಡುಗಡೆಯಾಗಲಿದೆ.)

ಕೈಲಾಸ ಎತ್ತುತ್ತಿರುವ ರಾವಣ– ಲೋಹದಲ್ಲಿ ಬಿಡಿಸಿದ ಚಿತ್ರ

